

15ನೇ ಶತಮಾನದಲ್ಲಿ ಪಾಶ್ಚಿಮಾತ್ಯರ ರಾಜಮನೆತನಗಳ ರಾಣಿಯರು ಪಫ್ ಸ್ಲೀವ್ಸ್ ಹೊಂದಿರುವ ಲಾಂಗ್ ಗೌನ್ ಧರಿಸುತ್ತಿದ್ದರು. ಪಫ್ ತೋಳುಗಳನ್ನು ಬೇಕೆಂದಾಗ ಅಟ್ಯಾಚ್ ಮಾಡಿಕೊಳ್ಳಬಹುದಾದ, ಬೇಡವೆಂದಾಗ ತೆಗೆದಿರಿಸಬಹುದಾದ ವಿನ್ಯಾಸವನ್ನು ಆಗಿನ ವಸ್ತ್ರ ವಿನ್ಯಾಸಕಾರರು ರೂಪಿಸಿದ್ದರು. ಈ ವಿನ್ಯಾಸ ಹೆಚ್ಚು ಪ್ರಚಲಿತಕ್ಕೆ ಬಂದಿದ್ದು 19ನೇ ಶತಮಾನದ ವಿಕ್ಟೋರಿಯನ್ ಯುಗದಲ್ಲಿ ಎಂತಲೇ ಹೇಳಬಹುದು. ಆಗಿನ ವಿಕ್ಟೋರಿಯನ್ ಮನೆತನದ ರಾಣಿಯರ ಯಾವುದೇ ಚಿತ್ರಗಳನ್ನು ಗಮನಿಸಿದರೂ ಪಫ್ ಸ್ಲೀವ್ಸ್ ಹೊಂದಿರುವ ಲಾಂಗ್ ಗೌನ್‌ಗಳಲ್ಲಿ ಮಿಂಚಿರುವುದು ಕಣ್ಣಿಗೆ ರಾಚುತ್ತದೆ. ಸೌಂದರ್ಯದ ಪ್ರತೀಕವಾಗಿ ಈ ವಿನ್ಯಾಸದ ಉಡುಗೆಗಳನ್ನು ರಾಣಿಯರು ಬಳಸುತ್ತಿದ್ದರು. ಹೀಗೆ ಆರೇಳು ಶತಮಾನಗಳಷ್ಟು ಹಿಂದಿನ ವಿನ್ಯಾಸವಾದರೂ ಆಧುನಿಕತೆಯ ಯುಗದಲ್ಲಿ ಅದರ ಮೆರುಗನ್ನು ಸ್ವಲ್ಪವೂ ಮಾಸಿಕೊಳ್ಳದೆ, ಹೊಳಪನ್ನು ಹೆಚ್ಚಿಸಿಕೊಂಡಿದೆ ಪಫ್ ಸ್ಲೀವ್.

## ಸೀರೆಯ ಮೆರುಗು ಹೆಚ್ಚಿಸಲು



ಯಾವುದೇ ಬಗೆಯ ಸೀರೆ ಇರಲಿ, ಅದರ ಮೆರುಗು ಹೆಚ್ಚುವುದು ರವಿಕೆಯಿಂದಲೇ. ರವಿಕೆಯ ವಿನ್ಯಾಸ, ಅದ್ದೂರಿತನ ಲಲನೆಯರ ಅಂದ ಹೆಚ್ಚಿಸುತ್ತದೆ. ವಿವಾಹ ಸಮಾರಂಭದಲ್ಲಿ ಮದುಮಗಳಾದಿಯಾಗಿ ಎಲ್ಲರ ಆಯ್ಕೆ ಪಫ್ ಸ್ಲೀವ್ ರವಿಕೆಯದ್ದೇ. ಮದುಮಗಳು ಏಳೆಂಟು ಸೀರೆಗಳ ರವಿಕೆಯನ್ನು ವಿನ್ಯಾಸ ಮಾಡಿಸಿಕೊಂಡರೆ ಅದರಲ್ಲಿ ಒಂದೆರಡು ಪಫ್ ಸ್ಲೀವ್ ವಿನ್ಯಾಸದ್ದಾಗಿರುತ್ತದೆ. ಗ್ರ್ಯಾಂಡ್ ಎಂಬ್ರಾಯಿಡರಿ ವರ್ಕ್, ಪ್ಯಾಚ್ ವರ್ಕ್, ಲೇಸ್ ವರ್ಕ್ ವಿನ್ಯಾಸಕ್ಕೆ ಪಫ್ ಸ್ಲೀವ್ಸ್ ಹೊಂದಿಕೆಯಾಗುತ್ತದೆ. ಮೇಲ್ಭಾಗ ಪಫ್ ಇಟ್ಟು, ಕೆಳಭಾಗ ಸೀರೆಯ ಬಾರ್ಡರ್‌ಗೆ ಎಂಬ್ರಾಯಿಡರಿ ವರ್ಕ್ ಮಾಡಿಸಿದರೆ ಗ್ರ್ಯಾಂಡ್ ಲುಕ್ ನೀಡುತ್ತದೆ. ಇದರಲ್ಲೇ ಮತ್ತೊಂದು ವಿನ್ಯಾಸ ‘ಬಲೂನ್ ತೋಳು’ ಈಗ ಟ್ರೆಂಡ್. ರೇಷ್ಮೆ ಬಟ್ಟೆಗೆ ಹೆಚ್ಚು ಹೊಂದುವ ಈ ವಿನ್ಯಾಸ ಭುಜದಿಂದ ಅರ್ಧ ಭಾಗದವರೆಗೆ ನೆರಿಗೆ ಹಚ್ಚಿ ಇನ್ನರ್ಧ ಭಾಗಕ್ಕೆ ಬಾರ್ಡರ್ ಹಚ್ಚಲಾಗುತ್ತದೆ. ಅದರ ತುದಿಗೆ ಸಣ್ಣ ನೆರಿಗೆಯನ್ನು ಕೊಡಲಾಗುತ್ತದೆ. ಇದರಲ್ಲೇ ‘ವಿ’ ಶೇಪ್ ಪಫ್ ಈಗ ಟ್ರೆಂಡಿಯಾಗಿದೆ. ಸಿಂಥೆಟಿಕ್, ಸ್ಯಾಟಿನ್, ಕಾಟನ್, ಶಿಫಾನ್, ರೇಷ್ಮೆ, ಜಾರ್ಜೆಟ್, ನೆಟ್ಟೆಡ್ ಹೀಗೆ ಎಲ್ಲ ಬಟ್ಟೆಗಳಿಗೆ ಪಫ್ ಸ್ಲೀವ್ಸ್ ಹೊಂದಿಕೆಯಾಗುತ್ತದೆ. ಲಾಂಗ್ ಪಫ್, ಹಾಫ್ ಪಫ್, ಗ್ಯಾದರಿಂಗ್ ಪಫ್, ಕೌಲ್ ಪಫ್, ಬಲೂನ್ ಪಫ್ ಹೀಗೆ ಹಲವು ವಿನ್ಯಾಸದ ಸ್ಲೀವ್‌ಗಳು ವಿನ್ಯಾಸಕಾರರ ಕೈಯಲ್ಲರಳಿವೆ. ನಿತ್ಯ ಧರಿಸುವ ರವಿಕೆಯಿಂದ ಹಿಡಿದು ದೊಡ್ಡ ಸಮಾರಂಭಗಳ ರವಿಕೆಗೂ ಪಫ್‌ಸ್ಲೀವ್ಸ್ ನಂಟು ಇದ್ದೇ ಇರುತ್ತದೆ.

## ಗುಬ್ಬಿ ತೋಳು ವರದಾನ

ಸ್ಥೂಲಕಾಯ ಇರುವವರಿಗೆ ಸಾಮಾನ್ಯವಾಗಿ ಭುಜದಿಂದ ಮೊಣಕೈ ಭಾಗ ದಪ್ಪ ಇರುತ್ತದೆ. ಅದನ್ನು ಅಡಗಿಸಲು ಪಫ್ ಸ್ಲೀವ್ ಸಹಕಾರಿ. ಭುಜದ ಭಾಗದಲ್ಲಿ ಪಫ್ ಮಾಡಿಕೊಂಡು ಮೊಣಕೈವರೆಗೆ ಟೈಟ್ ಸ್ಟಿಚ್ ಮಾಡಿದರೆ ಕೈ ಸಣ್ಣದಾಗಿ ಕಾಣುತ್ತದೆ. ಜತೆಗೆ ಲಾಂಗ್ ಪಫ್ ಕೂಡ ಬಳಸಬಹುದು. ಭುಜದಿಂದ ಮುಂಗೈವರೆಗೆ ಅಥವಾ ತ್ರೀಫೋರ್ಥ್ ಬಲೂನ್ ಪಫ್ ಸ್ಲೀವ್ಸ್ ತೊಡಬಹುದು. ಇನ್ನು ತೆಳ್ಳಗಿರುವವರಿಗೂ ಪಫ್ ತೋಳು ವರದಾನವೇ. ತೆಳ್ಳನೆ ಕೈ ಇರುವವರು ಹೆಚ್ಚು ಪಫ್ ಇರುವ ಉಡುಪು ಧರಿಸಿದರೆ ಕೈ ಉಬ್ಬಿದ ರೀತಿ ಕಾಣುತ್ತದೆ. ಭುಜದಿಂದ ಮೊಣಕೈವರೆಗೂ ಪಫ್ ಮಾಡಿಕೊಂಡು ಆತ್ಮವಿಶ್ವಾಸದಿಂದ ಬೀಗಬಹುದು.



## ಮಿಕ್ಸ್ ಮ್ಯಾಚ್ ಮಾಡಿಕೊಳ್ಳಿ

ಸೀರೆ ಎರಡು ಬಣ್ಣ ಹೊಂದಿದ್ದರೆ, ಆ ಎರಡೂ ಬಣ್ಣ ಮಿಕ್ಸ್ ಮಾಡಿ ರವಿಕೆ ವಿನ್ಯಾಸ ಮಾಡಿಕೊಳ್ಳಬಹುದು. ಇದಕ್ಕೆ ಪಫ್ ಸ್ಲೀವ್ಸ್ ಹೆಚ್ಚು ಹೊಂದುತ್ತದೆ. ತೋಳಿನ ಮೇಲ್ಭಾಗ ಒಂದು ಬಣ್ಣದ ಬಟ್ಟೆಯಿಂದ ಪಫ್ ಮಾಡಿಕೊಂಡು, ಇನ್ನರ್ಧ ಭಾಗ ಇನ್ನೊಂದು ಬಣ್ಣದ ಬಟ್ಟೆಯಿಂದ ಪಫ್ ಮಾಡಿಕೊಳ್ಳಬಹುದು ಅಥವಾ ಪಟ್ಟಿ ರೀತಿ ಹಚ್ಚಿಕೊಳ್ಳಬಹುದು. ಅದೇ ರೀತಿ ಕಪ್ಪು ಬಣ್ಣದ ಸೀರೆ ಇದ್ದರೆ ಬಿಳಿ ಬಣ್ಣದ ಪಫ್ ಹಚ್ಚಿಕೊಳ್ಳಬಹುದು. ಇದು ಟ್ರೆಂಡೀ ಲುಕ್ ನೀಡುತ್ತದೆ. ಕಾಲರ್ ರವಿಕೆ, ಟೀ ಶರ್ಟ್, ಕ್ರಾಪ್ ಟಾಪ್, ಬೋಟ್ ನೆಕ್ ವಿನ್ಯಾಸಕ್ಕೆ ಪಫ್ ಸ್ಲೀವ್ ಈಗಿನ ಟ್ರೆಂಡ್.

30–40 ವರ್ಷಗಳಾದರೂ ಹೊಸದರಂತಿರುವ ಮದುವೆಯ ರೇಷ್ಮೆ ಸೀರೆ ಹಳತಾಗಿರುವ ರವಿಕೆಯ ಕಾರಣಕ್ಕೆ ಮೂಲೆ ಸೇರಿರುತ್ತದೆ. ಬೆವರಿನ ಕಾರಣಕ್ಕೆ ರವಿಕೆ ಭುಜದ ಭಾಗ ಹಳತಾಗಿ ಮೆರುಗು ಕಳೆದುಕೊಂಡಿರುತ್ತದೆ. ಇದಕ್ಕೆ ಪಫ್ ಸ್ಲೀವ್ ಮೂಲಕ ಹೊಸ ಮೆರುಗು ನೀಡಬಹುದು. ಸೀರೆ ಬಣ್ಣದ ರೇಷ್ಮೆ ಬಟ್ಟೆಯನ್ನು ಪಫ್ ಮಾಡಿಕೊಂಡು ಬಾರ್ಡರ್ ಹಚ್ಚಿಸಿದರೆ ರವಿಕೆಗೆ ಹೊಸತನ ಬರುತ್ತದೆ. ಆಗ ಅಚ್ಚುಮೆಚ್ಚಿನ ಸೀರೆ ಉಟ್ಟು ಬೀಗಬಹುದು.

‘ಲೆಗ್ ಆಫ್ ಮಟನ್’ ಪಫ್ ಸ್ಲೀವ್ಸ್ ಈಗ ಫ್ಯಾಷನ್‌ಪ್ರಿಯರ ಅಚ್ಚು ಮೆಚ್ಚು. ಹೆಸರೇ ಹೇಳುವಂತೆ ಭುಜದಿಂದ ಮೊಣಕೈವರೆಗೆ ಪಫ್ ಬರುತ್ತದೆ. ಮೊಣಕೈನಿಂದ ಮುಂಗೈವರೆಗೆ ಟೈಟ್ ಫಿಟಿಂಗ್ ಇರುತ್ತದೆ. ಇದು ಗೌನ್, ಸೀರೆ, ಲಾಂಗ್ ಫ್ರಾಕ್, ಹಾಫ್ ಫ್ರಾಕ್ ಈ ಬಗೆಯ ಉಡುಪಿಗೆ ಹೆಚ್ಚು ಹೊಂದಿಕೆಯಾಗುತ್ತದೆ. ಇದು ಈಗಿನ ಟ್ರೆಂಡ್.

‘ಪೊಯೆಟ್ ಪಫ್’ ಇನ್ನೊಂದು ಮಾದರಿಯ ಹೊಸ ಲುಕ್ ನೀಡುತ್ತದೆ. ಭುಜದಿಂದ ಮೊಣಕೈವರೆಗೆ ಪಫ್ ಇರುತ್ತದೆ. ಬಳಿಕ ಎಲಾಸ್ಟಿಕ್ ಹಾಕಲಾಗುತ್ತದೆ. ಅಲ್ಲಿಂದ ಮುಂದಕ್ಕೆ ಲೇಯರ್ಡ್ ಅಥವಾ ಅಂಬ್ರೆಲಾ ರೀತಿ ಹೊಲಿಯಲಾಗುತ್ತದೆ. ಟೀ ಶರ್ಟ್, ಕ್ರಾಪ್ ಟಾಪ್, ಲಾಂಗ್ ಗೌನ್‌ಗೆ ಹೆಚ್ಚು ಸೂಕ್ತ. ಕಾಲೇಜು ಹುಡುಗಿಯರು, ಕಚೇರಿ ಕೆಲಸಕ್ಕೆ ಹೋಗುವವರು, ಸಣ್ಣ ಪುಟ್ಟ ಪಾರ್ಟಿಗೆ ಹೋಗುವವರು ಈ ಬಗೆಯ ವಿನ್ಯಾಸದ ಉಡುಗೆ ತೊಡಬಹುದು’ ಎನ್ನುತ್ತಾರೆ ದಾವಣಗೆರೆಯ ವಸ್ತ್ರವಿನ್ಯಾಸಕಿ ಸುಪ್ರಿಯಾ ವಿನೋದ್.

‘ಬಲೂನ್ ಗೌನ್ ಈಗ ಟ್ರೆಂಡಿಯಾಗಿದೆ. ಕುತ್ತಿಗೆ ಭಾಗದಿಂದ ಎದೆಯ ಕೆಳಮಟ್ಟದವರೆಗೆ ನೆರಿಗೆಗಳು ಇರುತ್ತವೆ. ಕೆಳಭಾಗದಲ್ಲಿ ಎಲಾಸ್ಟಿಕ್ ಬಳಸಿ ಉಬ್ಬುವಂತೆ ಮಾಡಲಾಗುತ್ತದೆ. ಇದೇ ವಿನ್ಯಾಸವನ್ನು ತೋಳಿಗೂ ಬಳಸಲಾಗುತ್ತದೆ. ದಪ್ಪ, ತೆಳ್ಳಗಿರುವ ಯಾರಾದರೂ ಇದನ್ನು ತೊಡಬಹುದು. ಫ್ಯಾಷನ್ ಪ್ರಿಯರನ್ನು ಇದು ಹೆಚ್ಚು ಆಕರ್ಷಿಸಿದೆ. ನೆಟ್ಟೆಡ್ ಬಟ್ಟೆಯಲ್ಲಿ ಈ ಬಗೆಯ ವಿನ್ಯಾಸ ಮಾಡಲಾಗುತ್ತದೆ’ ಎನ್ನುತ್ತಾರೆ ಸುಪ್ರಿಯಾ.